# ಯುವ ನಿರ್ದೇಶಕನ ‘ಕಬೀರ ಧ್ಯಾನ’



ಇಂದ್ರಬಾಬು ನಿರ್ದೇಶನದ ‘ಸಂತೆಯಲ್ಲಿ ನಿಂತ ಕಬೀರ’ ಇತ್ತೀಚಿನ ದಿನಗಳಲ್ಲಿ ತೆರೆಕಂಡ ಅತ್ಯುತ್ತಮ ಕನ್ನಡ ಸಿನಿಮಾಗಳಲ್ಲೊಂದು. ಐತಿಹಾಸಿಕ ಚಿತ್ರಗಳನ್ನು ರೂಪಿಸುವುದು ದುಬಾರಿ ಹಾಗೂ ಸವಾಲು ಎನ್ನಿಸಿರುವ ದಿನಗಳಲ್ಲಿ ಕಬೀರನಂಥ ಸಂತಕವಿಯನ್ನು ಬಾಬು ತೆರೆಗೆ ತಂದಿರುವುದು ಯುವ ನಿರ್ದೇಶಕನೊಬ್ಬನ ಮಹತ್ವಾಕಾಂಕ್ಷೆಗೆ ಉದಾಹರಣೆಯಂತಿದೆ.

ಬಹುತೇಕ ನಿರ್ದೇಶಕರು ಸಿದ್ಧಸೂತ್ರಗಳ ಸಿನಿಮಾಗಳಲ್ಲಿ ತೊಡಗಿಕೊಂಡಿರುವ ಸಂದರ್ಭದಲ್ಲಿ, ಜಾಡು ಬಿಟ್ಟು ಸಿನಿಮಾ ರೂಪಿಸಲಿಕ್ಕೆ ಧೈರ್ಯದ ಜೊತೆಗೆ ಕೊಂಚ ಭಂಡತನವೂ ಬೇಕು. ಈ ವಿಶೇಷ ಗುಣಗಳು ಬಾಬು ಅವರಿಗೆ ಇದ್ದಂತಿದೆ. ‘ಕಬಡ್ಡಿ’ಯಂಥ ಗಮನಾರ್ಹ ಚಿತ್ರ ನಿರ್ದೇಶಿಸಿದ ನಂತರವೂ ಐದು ವರ್ಷಗಳಿಗೂ ಹೆಚ್ಚುಕಾಲ ಅಜ್ಞಾತವಾಸದಲ್ಲಿದ್ದವರು ಇಂದ್ರಬಾಬು. ಒಂದರ ಬೆನ್ನಿಗೊಂದು ಸಿನಿಮಾ ನಿರ್ದೇಶಿಸುವ ಆಮಿಷಕ್ಕೆ ಒಳಗಾಗದ ಅವರು, ಕಬೀರನನ್ನು ಧ್ಯಾನಿಸಿ ಸಿನಿಮಾ ಮಾಡಿದ್ದಾರೆ.

ಸೊಗಸಾದ ಚಿತ್ರತಂಡವನ್ನು ಕಟ್ಟಿಕೊಂಡಿರುವ ನಿರ್ದೇಶಕರ ಜಾಣ್ಮೆ ಗಮನಾರ್ಹ. ಸಿನಿಮಾದ ತೆರೆಮರೆಯಲ್ಲಿ ಕಾಣಿಸುವ ಪಕ್ವ ಮನಸ್ಸು ಗೋಪಾಲ ವಾಜಪೇಯಿ ಅವರದು. ವಾಜಪೇಯಿ ಅವರ ಸಾಹಿತ್ಯ ಕಬೀರ ಚಿತ್ರವನ್ನು ಅಂತರ್ಜಲದಂತೆ ಪೊರೆದಿದೆ. ‘ನಾವು ಪ್ರೇಮದ ಹುಚ್ಚರು / ನಾವು ಪ್ರೇಮೋನ್ಮತ್ತರು’ ಎನ್ನುವ ಅವರ ಸಾಲುಗಳು ಕಬೀರನ ವ್ಯಕ್ತಿತ್ವದ ಜೊತೆಗೆ, ಈ ಚಿತ್ರದಲ್ಲಿ ತೊಡಗಿಕೊಂಡವರ ಹುಚ್ಚನ್ನೂ ಸೂಚಿಸುವಂತಿದೆ. ಇಂಥ ಹುಚ್ಚು ಹೆಚ್ಚಬೇಕಾದುದು ಗಾಂಧಿನಗರದ ನಾಳೆಗಳ ದೃಷ್ಟಿಯಿಂದ ಅಪೇಕ್ಷಣೀಯ.

ಕನ್ನಡ ಚಿತ್ರರಂಗದಲ್ಲಿ ಹೊಸ ತಲೆಮಾರೊಂದು ಹುಮ್ಮಸ್ಸಿನಿಂದ ಸಿನಿಮಾಗಳನ್ನು ರೂಪಿಸುತ್ತಿರುವ ದಿನಗಳಿವು. ತಾಂತ್ರಿಕವಾಗಿ ಗಮನಸೆಳೆಯುವ ಹೊಸಬರ ಚಿತ್ರಗಳು, ನೆಲದ ಸೊಗಡಿನ ವಿಷಯದಲ್ಲಿ ನಿರಾಶೆ ಹುಟ್ಟಿಸುವಂತಿರುತ್ತವೆ. ಈ ನಿಟ್ಟಿನಲ್ಲಿ ಕೂಡ ಇಂದ್ರಬಾಬು ಅವರ ಕಬೀರ ಗಮನಸೆಳೆಯುತ್ತಾನೆ. ಈ ಕಬೀರ ಉತ್ತರಭಾರತಕ್ಕೆ ಸೀಮಿತವಾಗದೆ, ಕನ್ನಡ ನೆಲದವನಂತೆಯೇ ರೂಪುಗೊಂಡಿರುವುದು ಗಮನಾರ್ಹ.


ಪ್ರಸಿದ್ಧಿಯ ಸೊಬಗಿನ ಸಂಭ್ರಮ

ಶ್ರೀ ವರಮಹಾಲಕ್ಷ್ಮಿ ಬಾರಮ್ಮ



Showrooms @

K.H. Road Ph: 22236613 | M.G. Road Ph: 25580433 | Marathahalli 9448288522/12

Bannerghatta Road Ph: 26689345 | Commercial Street Ph: 25321545 | Domlur Ph: 41511156

Silks, Cotton & Salwars

Prasiddhi® SILKS

A renowned name for well known sarees